# ಮೃದಂಗ ವಿದ್ವಾಂಸರಿಗೆ ಅಕ್ಷರ ನಮನ!

ಮೃದಂಗ ವಾದನದಲ್ಲಿ ಸಾಕಷ್ಟು ಹೆಸರು ಮಾಡಿ ಮುಂಚೂಣಿಯಲ್ಲಿದ್ದವರು ಬಹುಶ್ರುತ ವಿದ್ವಾನ್ ಬಿ.ಕೆ. ಚಂದ್ರಮೌಳಿ. ಮೃದಂಗ ಅಲ್ಲದೆ ಘಟಂ, ಖಂಜೀರ, ಕೊನ್ನಕೋಲ್‌ಗಳಲ್ಲೂ ಪರಿಣತರಾಗಿದ್ದ ಚಂದ್ರಮೌಳಿ ಅಪಾರ ಸಂಗೀತಪ್ರಿಯರನ್ನು ಅಗಲಿ ಬಾರದ ಲೋಕಕ್ಕೆ ತೆರಳಿದ್ದಾರೆ. ಬಿಕೆಸಿ ಅವರಿಗಿದೋ ಅಕ್ಷರ ನಮನ!

■ ಉಮಾ ಅನಂತ್

ತಾಳವಾದ್ಯದಲ್ಲಿ ಮೃದಂಗಕ್ಕೆ ಮಹತ್ವದ ಸ್ಥಾನ. ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ಅಪೂರ್ಣವೆನಿಸುವುದು ಮೃದಂಗ ಪಕ್ಕವಾದ್ಯ ಇಲ್ಲದೇ ಹೋದರೆ. ಒಂದು ಪ್ರಮುಖ ಅವನದ್ಧ ವಾದ್ಯವಾಗಿರುವ ಮೃದಂಗದಲ್ಲಿ ಸಾಕಷ್ಟು ಸಾಧನೆ ಮಾಡಿ ಸಂಗೀತ ಕ್ಷೇತ್ರದಲ್ಲಿ ಹೆಸರುವಾಸಿಯಾದವರು ವಿದ್ವಾನ್ ಬಿ.ಕೆ. ಚಂದ್ರಮೌಳಿ. ಮೃದಂಗ ನುಡಿಸಾಣಿಕೆಯಲ್ಲಿ ಇವರದು ಎಷ್ಟು ಪಳಗಿದ ಕೈ ಆಗಿತ್ತೋ ಅಷ್ಟೇ ಖಂಜೀರ, ಕೊನ್ನಕೋಲ್‌ಗಳಲ್ಲೂ ಸಾಧನೆಯ ಶಿಖರಕ್ಕೇರಿದ್ದರು. ಹೀಗಾಗಿ ಚಂದ್ರಮೌಳಿ ಬಹುಶ್ರುತ ವಿದ್ವಾಂಸರು.

ಬೆಂಗಳೂರಿನ ರಾಜಾಜಿನಗರದಲ್ಲಿ 1978ರಲ್ಲಿ ಮೂಕಾಂಬಿಕಾ ತಾಳ ವಾದ್ಯ ಕಲಾಶಾಲೆಯಲ್ಲಿ ಕಳೆದ ಸುಮಾರು 40 ವರ್ಷಗಳಿಂದ ಮೃದಂಗ ನಾದವನ್ನು ಅನುರಣಿಸುತ್ತಾ ಬಂದಿದ್ದರು. ನೂರಾರು ಮಕ್ಕಳಿಗೆ ಇಲ್ಲಿ ತಾಳವಾದ್ಯಗಳಾದ ಮೃದಂಗ, ಘಟಂ, ಖಂಜೀರ ಕಲಿಯಲು ಅನುವು ಮಾಡಿ ಕೊಟ್ಟಿದ್ದರು. ಸ್ವತಃ ಚಂದ್ರಮೌಳಿ ಅವರೇ ಮಕ್ಕಳಿಗೆ ಕೊನ್ನಕೋಲ್ ಕೂಡ ಹೇಳಿ ಕೊಟ್ಟು, ಸಂಗೀತದ ಸಮಗ್ರ ಪರಿಚಯ ಮಾಡಿಕೊಡುತ್ತಿದ್ದರು. ಜತೆಗೆ ತ್ಯಾಗರಾಜ, ಪುರಂದರದಾಸರ ಆರಾಧನಾ ಮಹೋತ್ಸವವನ್ನೂ ಏರ್ಪಡಿಸಿ ಮಕ್ಕಳಿಗೆ ಪ್ರತಿಭೆ ಅನಾವರಣಕ್ಕೆ ಅವಕಾಶವನ್ನೂ ಕಲ್ಪಿಸುತ್ತಿದ್ದರು.

ಸದ್ಯ ಚಂದ್ರಮೌಳಿ ಅವರ ಮಗ ಬಿ.ಸಿ. ಮಂಜುನಾಥ್ ಕೂಡ ತಂದೆಯ ಹಾದಿಯಲ್ಲೇ ಸಂಗೀತವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅನೇಕ ಮೃದಂಗ ಕಛೇರಿಗಳನ್ನು, ಪಕ್ಕವಾದ್ಯ ಸಹಕಾರವನ್ನೂ ನೀಡಿ ಮೃದಂಗ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದು ಸಮಾಧಾನದ ಸಂಗತಿ.

ಬರೀ ಶಾಸ್ತ್ರೀಯ ಸಂಗೀತವನ್ನು ಮಾತ್ರ ತಾಳದೊಂದಿಗೆ ಪ್ರಸ್ತುತಪಡಿಸಿದಾಗ ಅದು ಮಾಧುರ್ಯಪೂರ್ಣವಾಗಿರುತ್ತದೆ ಎನ್ನುವುದು ತಪ್ಪು ಕಲ್ಪನೆ. ಸಂಗೀತದ ಯಾವುದೇ ಪ್ರಕಾರಗಳನ್ನು ತೆಗೆದುಕೊಂಡರೂ ಅದು ರಾಗಾಧಾರಿತ ಆಗಿರುತ್ತದೆ. ಜತೆಗೆ ತಾಳದ ಗತಿಯನ್ನೂ, ನಡೆಯನ್ನೂ ಹೊಂದಿರುತ್ತದೆ. ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಆಳವಾದ ಇತಿಹಾಸವಿರುವುದರಿಂದ ಪಾರಂಪರಿಕ ಸಂಗೀತ ಅತ್ಯಂತ ಮೌಲ್ಯಯುತವಾದದ್ದು ಎಂಬುದನ್ನು ಇವರು ಬಲವಾಗಿ ನಂಬಿದ್ದರು.

ಮೂಲತಃ ಚಿಕ್ಕಮಗಳೂರಿನವರಾದ ಚಂದ್ರಮೌಳಿ, ಆರನೇ ವಯಸ್ಸಿಗೇ ಮೃದಂಗವನ್ನು ವಿದ್ವಾನ್ ಅಯ್ಯಮಣಿ ಅಯ್ಯರ್ ಅವರಲ್ಲಿ ಕಲಿತರು. ಎರಡು ವರ್ಷ ಕಲಿತ ಬಳಿಕ ವಿದ್ವಾನ್ ಕೆ.ಎಸ್. ಗೋಪಾಲರಾವ್ ಅವರಲ್ಲಿ ಕಲಿಯಲಾರಂಭಿಸಿದರು. ಹೆಚ್ಚಿನ ಅಭ್ಯಾಸಕ್ಕಾಗಿ ಚೆನ್ನೈಗೆ ತೆರಳಿದ ಅವರ ಖ್ಯಾತ ಮೃದಂಗ ವಾದಕ ಪಾಲ್ಘಾಟ್ ಆರ್. ರಘು ಅವರಲ್ಲಿ ನುಡಿಸಾಣಿಕೆಯ ತಂತ್ರಗಾರಿಕೆ ಅಂಶಗಳನ್ನೆಲ್ಲ ಬೇಗನೆ ಕರಗತ ಮಾಡಿಕೊಂಡರು.

ಚಂದ್ರಮೌಳಿ ಅವರ ತಾಯಿ ವಿದುಷಿ ಎ. ರಾಜಮ್ಮ ಕೇಶವಮೂರ್ತಿ ಅವರು ಉತ್ತಮ ಗಾಯಕಿ. ಇವರ ಗಾಯನಕ್ಕೆ ಮೃದಂಗ ಪಕ್ಕವಾದ್ಯ ನುಡಿಸಿ ತಮ್ಮ ಮೊದಲ ಕಛೇರಿಯನ್ನು ತಾಯಿಯ ಗಾಯನದೊಂದಿಗೇ ಆರಂಭಿಸಿದರು. ಅದಾಗಿ ತ್ಯಾಗರಾಜರ ಆರಾಧನೆ, ಸಂಗೀತ ಸಮ್ಮೇಳನಗಳು, ಉತ್ಸವಗಳಲ್ಲಿ ಮೃದಂಗ ನುಡಿಸಿ ಉತ್ತಮ ಮೃದಂಗ ವಾದಕರೆನಿಸಿಕೊಂಡರು. ಇವರ ಮೃದಂಗ ವಾದನಕ್ಕೆ ಎಲ್ಲಿಲ್ಲದ ಬೇಡಿಕೆಯೂ ಬರಲಾರಂಭಿಸಿತು. ಬಹುಬೇಗನೆ ಜನಪ್ರಿಯರಾದರು ಚಂದ್ರಮೌಳಿ.

ಖ್ಯಾತ ಕಲಾವಿದರಾಗಿದ್ದ ಆರ್.ಕೆ. ಶ್ರೀಕಂಠನ್, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಡಾ.ಎನ್. ರಮಣಿ, ಡಾ.ಎಲ್. ಸುಬ್ರಹ್ಮಣ್ಯಂ, ಕದ್ರಿ ಗೋಪಾಲನಾಥ್, ಬಾಂಬೆ ಸಹೋದರಿಯರು ಮುಂತಾದವರಿಗೆ ಮೃದಂಗ ಪಕ್ಕವಾದ್ಯ ನುಡಿಸಿ ಸೈ ಎನಿಸಿಕೊಂಡಿದ್ದರು. ಮೃದಂಗ ಅಷ್ಟೇ ಅಲ್ಲದೆ ಖಂಜೀರ, ಕೊನ್ನಕೋಲ್‌ಗಳಲ್ಲೂ ಸಾಕಷ್ಟು ಕಛೇರಿ ನೀಡಿ ಸಂಗೀತಪ್ರಿಯರ ಮನತಣಿಸಿದ್ದರು.

ಇವರ ಸಂಗೀತ ಸಾಧನೆಗೆ ಹಲವು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನೀಡುವ ಕರ್ನಾಟಕ ಕಲಾಶ್ರೀ, ಕಂಚಿ ಕಾಮಕೋಟಿ ಮಠ ಮತ್ತು ಬೆಂಗಳೂರಿನ ಇಸ್ಕಾನ್ ನೀಡುವ ಆಸ್ಥಾನ ವಿದ್ವಾನ್ ಇವುಗಳಲ್ಲಿ ಪ್ರಮುಖವಾದವು.

ಕರ್ನಾಟಕ ಗಾನಕಲಾ ಪರಿಷತ್ ರಾಜ್ಯದಲ್ಲಿ ಒಂದು ಪ್ರತಿಷ್ಠಿತ ಸಂಗೀತ ಸಂಸ್ಥೆ. ಇದರ ಕಾರ್ಯದರ್ಶಿಯಾಗಿ ಅನೇಕ ವರ್ಷ ದುಡಿದವರು. ಮಲ್ಲೇಶ್ವರ ಸಂಗೀತ ಸಭಾದ ಕಾರ್ಯದರ್ಶಿಯಾಗಿ, ತ್ಯಾಗರಾಜ ಗಾನಸಭಾದ ಖಜಾಂಚಿಯಾಗಿ, ಮುಳಬಾಗಿಲಿನ ಪುರಂದರದಾಸ ಆರಾಧನೋತ್ಸವ ಸಮಿತಿ ಟ್ರಸ್ಟ್‌ನ ಕಾರ್ಯದರ್ಶಿಯಾಗಿ ದುಡಿದು ಒಬ್ಬ ಉತ್ತಮ ಸಂಗೀತ ಸಂಘಟಕ ಎಂದೂ ಹೆಸರಾಗಿದ್ದರು.

ಸಂಗೀತ ವಲಯದಲ್ಲಿ ಅದರಲ್ಲೂ ಮೃದಂಗ ವಾದನದಲ್ಲಿ ಬಿ.ಕೆ.ಚಂದ್ರಮೌಳಿ ಅವರ ಹೆಸರು ಮುಂಚೂಣಿಯಲ್ಲೇ ಇತ್ತು. ಕಳೆದ ಕೆಲವು ತಿಂಗಳುಗಳಿಂದ ಪಿತ್ತಜನಕಾಂಗ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 68ರ ಹರೆಯದ ಈ ವಿದ್ವಾಂಸರು ಅಪಾರ ಸಂಗೀತ ಪ್ರೇಮಿಗಳನ್ನು ಬಿಟ್ಟು ಬಾರದ ಲೋಕಕ್ಕೆ ಪಯಣ ಬೆಳೆಸಿದ್ದಾರೆ.

ಹೌದು, ಇನ್ನು ಬಿಕೆಸಿ ಬರೀ ನೆನಪು ಮಾತ್ರ. ಇವರಿಗಿದೋ ಅಕ್ಷರ ನಮನ..! ■



ವಿದ್ವಾನ್ ಬಿ.ಕೆ. ಚಂದ್ರಮೌಳಿ